ಹೋದ. ಕಳಿಸೋದೇನೋ ಕಳಿಸಿದ ಆದರೆ ಈಗ ಏನು ಮಾಡಬೇಕು? ಮರ್ಯಾದೆಯ ತಾಕಲಾಟ ಶುರುವಾಯಿತು. ಮುಂದೆ ಎರಡು ಕಪ್‌ಗಳಲ್ಲಿ ಕಾಫಿ ಕೂತಿದೆ. ಏನು ಹೊಳೆಯಿತೋ ಆ ಕಪ್‌ನಿಂದ ಈ ಕಪ್‌ಗೆ, ಈ ಕಪ್‌ನಿಂದ ಆ ಕಪ್‌ಗೆ ಕಾಫಿ ಆರಿಸಲು ಶುರು ಮಾಡಿದ. ಬೆಚ್ಚಗಾದ ಕಾಫಿಯನ್ನು ಒಂದೇ ಸಲಕ್ಕೆ ಗುಟುಕರಿಸಿದ. ಬಿಲ್ ತಂದ ಸಪ್ಲೇಯರ್ ಇವನನ್ನೇ ದಿಟ್ಟಿಸಿ ನೋಡಿದಾಗ 'ನಮ್ಮ ಕಡೆ ಹೀಗೇ ಕುಡಿಯೋದು' ಎಂದು ಹೇಳಿ ಹಣ ಕೊಟ್ಟು ಹೊರಗೆ ಬಂದ. ಇನ್ನು ಹೋಟೆಲಿನ ಗೋಡೆಗಳನ್ನು ಸವರಿದರೆ ಸಾಕು ಸಾವಿರ ಕತೆಗಳು ಉದುರುತ್ತವೆ. ಒಬ್ಬರು ಅವುಗಳನ್ನು ಸದಾ ಗುಡಿಸುತ್ತಲೇ ಇರುತ್ತಾರೆ. ಹೋಟೆಲು ಕೋಣೆಗಳಲ್ಲಿ ಸಿನಿಮಾದ ಎಷ್ಟು ಕತೆ, ಹಾಡುಗಳು, ಚಿತ್ರ ಕತೆ, ಸಂಭಾಷಣೆಗಳು ರೂಪುಗೊಂಡಿವೆಯೋ? ಎಷ್ಟು ರಾಗಗಳು ಹೊಸದಾಗಿ ಹುಟ್ಟಿರುವವೋ? ನಮ್ಮ ಎಷ್ಟೋ ಸಿನಿಮಾ ಕತೆಗಾರರ ಡಿಮ್ಯಾಂಡ್ ಅಂದರೆ ಇಂಥ ಹೋಟೆಲಲ್ಲಿ ರೂಮು ಮಾಡಿಕೊಡಬೇಕು ಎಂದು. ಹಾಗೆ ಮಾಡಿಕೊಟ್ಟ ನಿರ್ಮಾಪಕರು ಹೇಳುವುದು 'ಅವನಿಗೆ ಕೊಡಬೇಕಾದ್ದೆಲ್ಲ ಕೊಟ್ಟು ರೂಮಲ್ಲಿ ಇಟ್ಟಿದ್ದೀವಿ' ಅಂತ. ಹಾಗಾಗಿ ನಮ್ಮ ಸಿನಿಮಾ ಸಾಹಿತ್ಯವನ್ನು 'ಇಡಿಸಿಕೊಂಡ ಸಾಹಿತ್ಯ'ವೆಂತಲೂ ಕರೆಯಬಹುದು. ಇರಲಿ ಅಲ್ಲಿಯ ಒಂದು ಲೋಟ ಎಷ್ಟು ಸಾವಿರ ಜನರ ದಾಹ ತೀರಿಸಿದೆಯೋ, ಸವೆಯದ ತಟ್ಟೆಯೊಂದು ಎಷ್ಟು ಲಕ್ಷ ಜನರ ಕೈಗಳಿಗೆ ಒಡ್ಡಿಕೊಂಡಿದೆಯೋ. ಬೆಂಗಳೂರಿನಂತ ಊರಲ್ಲಿ ಅದೆಷ್ಟು ಜನರು ತಮ್ಮದೇ ಮನೆಯೆಂಬಂತೆ ನಿಶ್ಚಿಂತೆಯಿಂದ ರಾತ್ರಿ ನಿದ್ರಿಸುವರೋ... ದುಡ್ಡು ವ್ಯಾಪಾರ ಪೈಪೋಟಿ ಲಾಭಗಳ ಆಚೆಯೂ ನಾವು ಅಲ್ಲಿರುವಷ್ಟು ಹೊತ್ತು ಅದು ನಮ್ಮ ನೆಲೆ. ನಮ್ಮದಲ್ಲದ ನಮ್ಮ ಮನೆ. ಹೀಗೆ ನಾವು ಜಾಸ್ತಿ ಭಾವುಕರಾದರೆ ಹೋಟೆಲಿನವರಿಗೆ ತಾಪತ್ರಯ. ಕೆಲವು ಕಡೆ ನಮ್ಮ 24 ಗಂಟೆಗಳು ಅವರಿಗೆ ಸರಿ ಬರುವುದಿಲ್ಲ. ಅವರ 24 ಗಂಟೆಗೆ ನಾವು ಹೊಂದಬೇಕು. ಕಾಲ ಎಷ್ಟು ಸರಿದರೂ ಗಲ್ಲಾದಲ್ಲಿ ಕೂತ ಮ್ಯಾನೇಜರ್ ಪಕ್ಕದಲ್ಲಿಯೇ ಕಾಫಿ ಡಬ್ಬಿ ಕೆಲವೆಡೆ ಇನ್ನೂ ಕೂತಿದೆ. ಜೊತೆಗೆ ಆತ ಚಿಲ್ಲರೆಯನ್ನು ಕೊಡುವ ಬದಲಾಗಿ ಒಂದು ಧೋರಣೆಯಿಂದ ನಮ್ಮೆಡೆಗೆ ಎಸೆಯುತ್ತಾನೆ ಇಲ್ಲಾ ಜಪ್ಪುತ್ತಾನೆ. ಯಾಕೋ? ಏನೆಲ್ಲಾ ಬದಲಾದರೂ ಇದೊಂದು ಹಾಗೇ ಉಳಿದಿದೆ.

ಬದರಿನಾಥ ದಾಟಿದ ಮೇಲೆ ಸಿಗುವ ಮಾನಾ ಎಂಬ ಊರಿನಲ್ಲಿ 'ಭಾರತದ ಕೊನೆಯ ಟೀ ಸ್ಟಾಲ್' ಎಂಬ ಹೆಗ್ಗಳಿಕೆಯ ಬೋರ್ಡ್ ಹಾಕಿಕೊಂಡು ಒಬ್ಬ ಟೀ ಸ್ಟಾಲ್ ನಡೆಸುತ್ತಿದ್ದಾನೆ. ಅಲ್ಲಿ ಭೇಟಿ ಕೊಟ್ಟವರೆಲ್ಲ ಇಂಡಿಯಾ ಬಿಟ್ಟು ಹೋಗಿ ಬಿಡುತ್ತೀವೇನೋ ಎಂದು ಭಾವ ಪರವಶರಾಗಿ ಟೀ ಕುಡಿಯುತ್ತಿರುತ್ತಾರೆ. ಅದನ್ನು ನೋಡಿದಾಗಿನಿಂದ ನನ್ನಲ್ಲಿ ಉಳಿದಿರುವ ಪ್ರಶ್ನೆಯೆಂದರೆ ಅದು ಭಾರತದ ಮೊದಲ ಟೀಸ್ಟಾಲೂ ಆಗಬಹುದಲ್ಲ ಎಂದು. ಆದರೆ ಕೊನೆಯದು ಎಂಬ ಸೆಂಟಿಮೆಂಟು ತರುವ ಲಾಭ ಬಹುಶಃ ಮೊದಲನೆಯದಕ್ಕಿರುವುದಿಲ್ಲವೇನೋ. ಅದು ಅವನಿಗೆ ಗೊತ್ತಿರುವ ಹಾಗೆ ಕಾಣುತ್ತದೆ. ಮೊದಲೋ ಕೊನೆಯೋ ಟೀ ಮಾತ್ರ ಸಕ್ಕರೆ ಪಾಕವೇ. ಚಿಕ್ಕವರಿದ್ದಾಗ ಒಂದು ಜೋಕು ಚಾಲ್ತಿಯಲ್ಲಿತ್ತು. ನಾಸಾ ವಿಜ್ಞಾನಿಗಳು ರಾಕೆಟ್‌ನಲ್ಲಿ ಚಂದ್ರಗ್ರಹಕ್ಕೆ ಹೋಗಿ ನೋಡುತ್ತಾರೆ... ಅವರಿಗಿಂತ ಮೊದಲು ಅಲ್ಲೊಂದು 'ಉಡುಪಿ ಫಲಹಾರ ಮಂದಿರ' ಇವರಿಗಾಗಿ ಕಾಯುತ್ತಿದೆ! ಇದು ಕರ್ನಾಟಕದ ಹೆಮ್ಮೆಯ ಉಡುಪಿ ಹೋಟೆಲುಗಳ ಜಗದ್ವಿಖ್ಯಾತಿಯನ್ನು ಹೇಳುವ ಪ್ರಯತ್ನ. ಈಗ ಬೇರೆ ಬೇರೆಯವರು ಪ್ರವೇಶಿಸಿದ ಮೇಲೆ ಉಡುಪಿಗಳು, ಕಾಮತ್‌ಗಳು ಸ್ವಲ್ಪ ಹಿಂದಾಗಿದ್ದಾರೆ. ಆದರೂ ನಮ್ಮ ಉಡುಪಿಯ ಕೀರ್ತಿ ಇನ್ನೂ ಮಾನಾ ಊರಿನವನಿಗೆ ಬಂದಿಲ್ಲ. ಗಡಿ ದಾಟೋ ಧೈರ್ಯವೇ ಅವನಿಗಿಲ್ಲವಲ್ಲ!